ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

**ಪಟ್ಟಿ-೦೭**

ಒಟ್ಟು ಪ್ರಶ್ನೆಗಳು – ೧೫

# ಕರ್ನಾಟಕ ವಿಧಾನ ಪರಿಷತ್ತು

## ನೂರ ಐವತ್ತಾರನೇ ಅಧಿವೇಶನ

**ಬುಧವಾರ, ದಿನಾಂಕ: ೨೦ನೇ ಆಗಸ್ಟ್, ೨೦೨೫**

---

**ಸಮೂಹ – III**

೧. ಸಾರಿಗೆ ಮತ್ತು ಮುಜರಾಯಿ ಸಚಿವರು

೨. ಲೋಕೋಪಯೋಗಿ ಸಚಿವರು

೩. ಕಂದಾಯ ಸಚಿವರು

೪. ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

೫. ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

೬. ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

---

## ರೈತರ ಹೆಸರಿನಲ್ಲಿದ್ದ ಪಹಣಿಯಲ್ಲಿ ವಕ್ಫ್ ಎಂದು ನಮೂದಿಸಲಾಗುತ್ತಿರುವ ಬಗ್ಗೆ

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೯೧ (೧೦೬೫) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯಾದ್ಯಂತ ಕಳೆದ ಕೆಲವು ದಿನಗಳಲ್ಲಿ ರೈತರ ಹೆಸರಿನಲ್ಲಿದ್ದ ಪಹಣಿಯಲ್ಲಿ ವಕ್ಫ್ ಎಂದು ನಮೂದಿಸಲಾಗಿದ್ದು, ಇದರ ಬಗ್ಗೆ ಸರ್ಕಾರದ ನಿಲುವೇನು ;

(ಆ) ರಾಜ್ಯಾದ್ಯಂತ ಇದರಿಂದ ರೈತರಲ್ಲಿ ಆಕ್ರೋಶ ಬುಗಿಲೆದ್ದು, ಮಾನ್ಯ ಮುಖ್ಯಮಂತ್ರಿಗಳು ಇದನ್ನು ಸರಿಪಡಿಸುವುದಾಗಿ ಮತ್ತು

ಕೈ ಬಿಡಲಾಗುವುದು ಎಂದು ತಿಳಿಸಲಾಗಿದ್ದು, ಬದಲಾವಣೆಯಾದ ಪಹಣಿಯಲ್ಲಿ ರೈತರ ಹೆಸರು ನಮೂದಿಸಲಾಗಿದೆಯೇ ; (ವಿವರ ಒದಗಿಸುವುದು)

(ಇ) ರಾಜ್ಯದಲ್ಲಿ ಒಟ್ಟು ಎಷ್ಟು ರೈತರ ಭೂಮಿ ಈ ರೀತಿಯಾಗಿ ವಕ್ಫ್ ಹೆಸರಿನಲ್ಲಿ ಪಹಣಿ ಬದಲಾವಣೆಯಾಗಿತ್ತು ; (ಜಿಲ್ಲಾವಾರು ರೈತರ ವಿವರ ನೀಡುವುದು)

(ಈ) ಸದರಿ ಬದಲಾವಣೆಯಾದ ಪಹಣಿಯಲ್ಲಿ ಮತ್ತೆ ರೈತರ ಹೆಸರಿಗೆ ಎಷ್ಟು ಜಮೀನು ತಿದ್ದುಪಡಿಯಾಗಿದೆ ; (ಜಿಲ್ಲಾವಾರು ರೈತರ ವಿವರ ನೀಡುವುದು)

(ಉ) ರೈತರ ಭೂಮಿಯನ್ನು ವಕ್ಫ್ ಹೆಸರಿನಲ್ಲಿ ಪಹಣಿಯನ್ನಾಗಿ ಮಾಡಲು ಯಾವ ಮಾನದಂಡಗಳಿವೆ ; ಈ ರೀತಿಯಾಗಿ ಮಾಡಿರುವುದು ಎಷ್ಟು ಸರಿ ; ಇದರ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ? (ಸಂಪೂರ್ಣ ವಿವರ ಒದಗಿಸುವುದು)

## ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಅರಿವು ಯೋಜನೆಯಡಿ ಹಣ ಬಿಡುಗಡೆ

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು) –**

೬೨ (೯೮೨) ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಓದುತ್ತಿರುವ ೧೦೧೨ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಅರಿವು ಯೋಜನೆಯಡಿ ಹಣ ಬಿಡುಗಡೆಯಾಗದ ಕಾರಣ ಪ್ರಸಕ್ತ ವರ್ಷ ಪರೀಕ್ಷೆಯಿಂದ ವಂಚಿತರಾಗುವ ಆತಂಕ ಎದುರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಈ ಯೋಜನೆಯಡಿ ಹಣ ಬಿಡುಗಡೆ ಮಾಡದಿರಲು ಕಾರಣಗಳೇನು ;

(ಇ) ಪ್ರತಿಭಾವಂತ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗದಂತೆ ಹಣ ಬಿಡುಗಡೆ ಮಾಡಲು ಅಗತ್ಯ ಕ್ರಮ ಕೈಗೊಳ್ಳಲಾಗುವುದೇ ?

## ಮೀನುಗಾರರ ಸುರಕ್ಷತೆಯ ಬಗ್ಗೆ

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೯೩ (೧೦೩೮) ಮೀನುಗಾರಿಕೆ, ಬಂದರು ಹಾಗೂ ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೫ ವರ್ಷಗಳಲ್ಲಿ ಕರಾವಳಿ ಜಿಲ್ಲೆಗಳಲ್ಲಿ (ದಕ್ಷಿಣ ಕನ್ನಡ ಉಡುಪಿ, ಉತ್ತರ ಕನ್ನಡ) ಮೀನುಗಾರರ ದೋಣಿ ದುರಂತದಿಂದ ಎಷ್ಟು ಮೀನುಗಾರರ ಸಾವಾಗಿದೆ ; (ತಾಲ್ಲೂಕುವಾರು ಸಂಪೂರ್ಣ ವಿವರ ಒದಗಿಸುವುದು)

(ಆ) ಮೀನುಗಾರರ ಪ್ರಾಣಕ್ಕೆ ಕಂಟಕವಾಗುತ್ತಿರುವ ಅಳಿವೆ ಬಾಗಿಲು ನಿರ್ವಹಣೆ, ಹೂಳು ತೆಗೆಯುವುದು, ಬ್ರೇಕ್ ವಾಟರ್ ವಿಸ್ತರಣೆ ಮಾಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ; ಈ ಬಗ್ಗೆ ಸರ್ಕಾರ ಕೈಗೊಂಡಲ್ಲಿ ಸೂಕ್ತ ಕಾರಣಗಳೇನು ; ಕೈಗೊಳ್ಳದಿರಲು ಕಾರಣಗಳೇನು ;

(ಇ) ಕಳೆದ ೩ ವರ್ಷಗಳಲ್ಲಿ ಮೀನುಗಾರಿಕಾ ಬಂದರುಗಳಲ್ಲಿ ಡ್ರೆಜಿಂಗ್ ಕಾರ್ಯ ನಡೆಸಲಾಗಿದೆಯೇ ; ನಡೆಸಿದ್ದರೆ ಯಾವೆಲ್ಲ ಬಂದರುಗಳಲ್ಲಿ ಡ್ರೆಜಿಂಗ್ ನಡೆಸಲಾಗಿದೆ (ವಿವರ ನೀಡುವುದು) ; ಸರ್ಕಾರಕ್ಕೆ ಕಾಲಕಾಲಕ್ಕೆ ಡ್ರೆಜಿಂಗ್ ಕಾರ್ಯ ನಡೆಸಲು ಇರುವ ಸಮಸ್ಯೆಯೇನು ;

(ಈ) ಪ್ರಸ್ತುತ ಮೀನುಗಾರರಿಗೆ ಏನೇನು ಸುರಕ್ಷಾ ಪರಿಕರಗಳನ್ನು ನೀಡಲಾಗುತ್ತಿದೆ; (ವಿವರ ಒದಗಿಸುವುದು) ಎಲ್ಲಾ ಮೀನುಗಾರರಿಗೆ ಜೀವರಕ್ಷಕ ಜಾಕೆಟ್‌ಗಳನ್ನು ಸರ್ಕಾರ ಏಕೆ ನೀಡಬಾರದು ; ಎಲ್ಲಾ ಮೀನುಗಾರರಿಗೆ ಜಾಕೆಟ್ ಕಡ್ಡಾಯಗೊಳಿಸಲಾಗಿದೆಯೇ ?

## ಸೊಪ್ಪಿನ ಬೆಟ್ಟಗಳಲ್ಲಿ ಕಟ್ಟಿರುವ ಮನೆಗಳನ್ನು ಸಕ್ರಮಗೊಳಿಸುವ ಬಗ್ಗೆ

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು) –**

೯೪ (೧೦೬೦) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಸೊಪ್ಪಿನ ಬೆಟ್ಟಗಳಲ್ಲಿ ಮನೆ ಕಟ್ಟಿಕೊಳ್ಳುವುದಕ್ಕೆ ಪರವಾನಿಗೆಯನ್ನು ಯಾವುದೇ ತೊಂದರೆ ಇಲ್ಲದೆ ನೀಡಲಾಗುತ್ತದೆಯೇ ; ಈಗಾಗಲೇ ಕಟ್ಟಿಕೊಂಡಿರುವ ಮನೆ ಜಾಗಗಳನ್ನು ಸಕ್ರಮಗೊಳಿಸಲಾಗುತ್ತಿದೆಯೇ ; ಈ ಬಗ್ಗೆ ಸರ್ಕಾರದ ಕ್ರಮಗಳಾವುವು ;

(ಆ) ಸೊಪ್ಪಿನ ಬೆಟ್ಟದ 'ಬ' ಕರಾಬನ್ನು ತೆಗೆದು ಹಾಕಲು ಸರ್ಕಾರದ ಕ್ರಮಗಳಾವುವು ? (ವಿವರ ನೀಡುವುದು)

## ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿ ಚಾಲನಾ ಪರವಾನಗಿ ಕುರಿತು

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೯೫ (೧೯೯೦) ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಪ್ರಾದೇಶಿಕ ಸಾರಿಗೆ ಕಚೇರಿಗಳಿಂದ ಸುಮಾರು ೭ ರಿಂದ ೮ ಲಕ್ಷ ಚಾಲನಾ ಪರವಾನಗಿ (Driving License) ಮತ್ತು ರಿಜಿಸ್ಟ್ರೇಷನ್ ಸರ್ಟಿಫಿಕೇಟ್ (Registration Certificate) ವಿತರಣಾ ಬಾಕಿ ಇದ್ದು ಅರ್ಜಿದಾರರು ಸುಮಾರು ೪೦–೫೦ ದಿನಗಳ ನಂತರವೂ ಸ್ಮಾರ್ಟ್ ಕಾರ್ಡ್‌ಗಳನ್ನು ಸ್ವೀಕರಿಸಿರದಿಲ್ಲದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ವಿಳಂಬಕ್ಕೆ ಕಾರಣಗಳೇನು ; ಇದಕ್ಕಾಗಿ ಇಲಾಖೆ ಯಾವ ಕ್ರಮ ಕೈಗೊಂಡಿದೆ ;

(ಆ) ರಾಜ್ಯಾದ್ಯಂತ ಬೈಕ್ ಟ್ಯಾಕ್ಸಿಗಳನ್ನು ನಿರ್ಬಂಧಿಸಿದ ನಂತರ ಬೆಂಗಳೂರು ಮತ್ತು ಇತರೆ (Tier-II) ನಗರಗಳಲ್ಲಿ ಆಟೋ ಚಾಲಕರು ಸರ್ಕಾರ ನಿಗದಿಪಡಿಸಿರುವ ಪ್ರಯಾಣ ದರಕ್ಕಿಂತ ಹೆಚ್ಚು ಮೊತ್ತ ವಿಧಿಸುತ್ತಿದ್ದು, ಸರ್ಕಾರ ಇದನ್ನು ತಡೆಯಲು ವಿಫಲವಾಗಿದೆಯೇ; ಸಾರಿಗೆ ಅಧಿಕಾರಿಗಳಿಗೆ ಸದರಿ ವಿಷಯದ ಕುರಿತು ಮಾಹಿತಿ ಇದ್ದರೂ ಸಹ ಕ್ರಮ ಕೈಗೊಳ್ಳದೆ ಇರುವುದಕ್ಕೆ ಕಾರಣಗಳೇನು ;

(ಇ) ರಾಜ್ಯಾದ್ಯಂತ ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ದಿನೇ ದಿನೇ ಅವ್ಯವಹಾರಗಳು ಹೆಚ್ಚಾಗುತ್ತಿರುವುದು ನಿಜವೇ ; ಇದನ್ನು ತಡೆಯಲು ಕೈಗೊಂಡ ಕ್ರಮವೇನು ; ಮಧ್ಯವರ್ತಿಗಳ ಹಾವಳಿ ಕಡಿಮೆ ಮಾಡಲು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ?

## ಬೀದರ್ ನಗರದಲ್ಲಿರುವ ಪಶುವೈದ್ಯಕೀಯ ವಿಶ್ವವಿದ್ಯಾಲಯ ಕುರಿತು

**ಡಾ: ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು) –**

೯೬ (೧೦೦೮) ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಡಾ: ಡಿ.ಎಂ. ನಂಜುಂಡಪ್ಪನವರ ವರದಿ ಆಧರಿಸಿ ಪ್ರಾದೇಶಿಕ ಅಸಮತೋಲನ ನಿವಾರಣೆಯ ಉದ್ದೇಶದಿಂದ ಕಲ್ಯಾಣ ಕರ್ನಾಟಕದ ಬೀದರ್ ನಗರದಲ್ಲಿ ಸ್ಥಾಪನೆಗೊಂಡಿರುವ ಪಶುವೈದ್ಯಕೀಯ ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯು ಅತಂತ್ರ ಸ್ಥಿತಿ ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ವಿಶ್ವವಿದ್ಯಾಲಯ ಸ್ವತಂತ್ರವಾಗಿ ಕೆಲಸ ಮಾಡಲು ಅವಕಾಶ ಕೊಡದೆ ಸರ್ಕಾರ ಇಂದು ರಾಯಚೂರಿನ ಕೃಷಿ ವಿಶ್ವವಿದ್ಯಾಲಯ ಮತ್ತು ಬಾಗಲಕೋಟೆಯ ತೋಟಗಾರಿಕಾ ವಿಶ್ವವಿದ್ಯಾಲಯಗಳೊಂದಿಗೆ ವಿಲೀನಗೊಳಿಸಲು ಮುಂದಾಗಿರುವುದು ನಿಜವೇ ;

(ಇ) ಬೀದರ್‌ನ ಪಶುವೈದ್ಯಕೀಯ ವಿಶ್ವವಿದ್ಯಾಲಯದಲ್ಲಿ ಬೋಧಕ/ಬೋಧಕೇತರ ಸಿಬ್ಬಂದಿಗಳ ಕೊರತೆ, ಕಟ್ಟಡಗಳ ಕೊರತೆ, ಅನುದಾನದ ಕೊರತೆಗಳ ನಿವಾರಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ ;

(ಈ) ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿರುವಾಗ ಈ ವಿಶ್ವವಿದ್ಯಾಲಯ ಬೇರೆ ವಿಶ್ವವಿದ್ಯಾಲಯುಗಳೊಂದಿಗೆ ವಿಲೀನಗೊಳಿಸಲು ಈಗಾಗಲೇ

ಉನ್ನತಾಧಿಕಾರಿ ಸಮಿತಿ ರಚಿಸಿರುವುದು ಈ ಭಾಗದ ಜನರಿಗೆ ಅನ್ಯಾಯ ಮಾಡಿದಂತಾಗುವುದಿಲ್ಲವೇ, ವಿಶ್ವವಿದ್ಯಾಲಯದ ಬೆಳವಣಿಗೆಗೆ ಕುತ್ತು ತಂದಂತಲ್ಲವೇ ;

(ಉ) ಬೀದರ್‌ನ ಪಶುವೈದ್ಯಕೀಯ ವಿಶ್ವವಿದ್ಯಾಲಯ ಬೇರೆ ವಿಶ್ವವಿದ್ಯಾಲಯಗಳೊಂದಿಗೆ ವಿಲೀನಗೊಳಿಸದೆ ಉನ್ನತಾಧಿಕಾರಿ ಸಮಿತಿ ರದ್ದುಪಡಿಸಿ ಆ ವಿಶ್ವವಿದ್ಯಾಲಯ ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಅವಕಾಶ ಮಾಡಿಕೊಟ್ಟು ಅದರ ಬೆಳವಣಿಗೆಗೆ ಬೇಕಾದ ಎಲ್ಲಾ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಕ್ರಮಕೈಗೊಳ್ಳುವುದೇ ?

## ಲೋಕೋಪಯೋಗಿ ಇಲಾಖೆಯ ಸೇತುವೆಗಳ ನಿರ್ವಹಣೆ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೯೭ (೧೦೪೩) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಲೋಕೋಪಯೋಗಿ ಇಲಾಖೆಯಡಿ ಬರುವ ಸಂಪರ್ಕ ಸೇತುವೆಗಳು ಯಾವುವು ; ಈ ಸೇತುವೆಗಳು ಯಾವ ಆರ್ಥಿಕ ವರ್ಷದಲ್ಲಿ ನಿರ್ಮಾಣವಾಗಿವೆ ; (ತಾಲ್ಲೂಕುವಾರು, ವಿಸ್ತೀರ್ಣ ಸಹಿತ ಸಂಪೂರ್ಣ ಮಾಹಿತಿ ನೀಡುವುದು)

(ಆ) ಈ ಜಿಲ್ಲೆಗಳಲ್ಲಿ ಸೇತುವೆಗಳ ನಿರ್ವಹಣೆಯನ್ನು ಕಾಲಕಾಲಕ್ಕೆ ಮಾಡಲಾಗುತ್ತಿದೆಯೇ ; ನಿರ್ವಹಣೆಗೆ ಯಾವ ಅಧಿಕಾರಿಯು ಜವಾಬ್ದಾರರಾಗಿರುತ್ತಾರೆ ; ಈವರೆಗೆ ಎಷ್ಟು ಸೇತುವೆಗಳನ್ನು ಎಷ್ಟು ಮೊತ್ತದಲ್ಲಿ ನಿರ್ವಹಣೆ ಮಾಡಲಾಗಿದೆ ; (ನಿರ್ವಹಣೆಯ ವಿಧದ ಜೊತೆಗೆ ಪ್ರತಿ ಕಾಮಗಾರಿಯ ಸಂಪೂರ್ಣ ವಿವರ ನೀಡುವುದು)

(ಇ) ಕುಸಿಯುವ ಸಾಧ್ಯತೆಯಿರುವ ಎಷ್ಟು ಸಂಪರ್ಕ ಸೇತುವೆಗಳ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ತಮ್ಮ ವರದಿಯನ್ನು ಇಲಾಖೆಗೆ ಸಲ್ಲಿಸಿದ್ದಾರೆಯೇ ; ಇವುಗಳ ಬಗ್ಗೆ ಇಲಾಖಾ ಹಂತದಲ್ಲಿ ಕೈಗೊಂಡ ಕ್ರಮಗಳೇನು ;

(ಈ) ಕುಂದಾಪುರ ತಾಲ್ಲೂಕಿನ ಅಮಾಸೆ ಬೈಲು ಮಚ್ಚಟ್ಟು ಗ್ರಾಮದ ತೊಂಬಟ್ಟು– ಕಬ್ಬಿನಾಲೆ ಸಂಪರ್ಕ ಸೇತುವೆ ಕುಸಿಯುವ ಭೀತಿಯಲ್ಲಿದ್ದು, ೨ ಪ್ರದೇಶಗಳ ನಡುವಿನ ಸಂಪರ್ಕ ಕಡಿತಗೊಳ್ಳುವ ಸಂಭವವಿರುವುದು ಇಲಾಖೆಯ ಗಮನಕ್ಕೆ ಬಂದಿದೆಯೇ ; ಈ ಬಗ್ಗೆ ಇಲಾಖಾಧಿಕಾರಿಗಳು ವರದಿ ನೀಡಿದ್ದಾರೆಯೇ ; ವರದಿಯ ಪ್ರತಿಯನ್ನು ಒದಗಿಸುವುದು ;

(ಉ) ಸೇತುವೆಯ ಮರು ನಿರ್ಮಾಣಕ್ಕೆ ಈವರೆಗೆ ಕೈಗೊಂಡ ಕ್ರಮಗಳೇನು ; ಈ ಕಾಮಗಾರಿಗೆ ಚಾಲನೆ ನೀಡಲಾಗುವುದು ಯಾವಾಗ ?

## ವಿವಿಧ ವಸತಿ ಯೋಜನೆಗಳಡಿ ಅಲೆಮಾರಿ ಜನಾಂಗದವರಿಗೆ ನೀಡಿರುವ ಮನೆಗಳ ಬಗ್ಗೆ

**ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) –**

೯೮ (೧೦೩೪) ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೨೩–೨೪ ರಿಂದ ೨೦೨೫–೨೬ರವರೆಗೆ ವಿವಿಧ ವಸತಿ ಯೋಜನೆಗಳಡಿ ಹಿಂದುಳಿದ ಅಲೆಮಾರಿ ಜನಾಂಗದವರಿಗೆ ಮಂಜೂರು ಮಾಡಲಾದ ಮನೆಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮತ್ತು ವಿಧಾನಸಭಾ ಕ್ಷೇತ್ರವಾರು ಮಾಹಿತಿ ನೀಡುವುದು)

(ಆ) ಮಂಜೂರಾತಿಯಾದ ಈ ಮನೆಗಳ ಪೈಕಿ ಇದುವರೆಗೂ ನಿರ್ಮಾಣ ಕಾರ್ಯ ಪೂರ್ಣಗೊಂಡ ಮನೆಗಳ ಸಂಖ್ಯೆ ಎಷ್ಟು ; ಅಪೂರ್ಣ ಮನೆಗಳ ಸಂಖ್ಯೆ ಎಷ್ಟು ;

(ಇ) ಮನೆಗಳ ನಿರ್ಮಾಣವನ್ನು ಮಾಡಲು ಪ್ರಸ್ತುತ ಇರುವ ಘಟಕ ವೆಚ್ಚದಲ್ಲಿ ಸಾಧ್ಯವಿದೆಯೇ; ಇಲ್ಲದಿದ್ದಲ್ಲಿ, ಸರ್ಕಾರವು ಘಟಕ ವೆಚ್ಚವನ್ನು ಪರಿಷ್ಕರಿಸಲು ತೆಗೆದುಕೊಂಡಿರುವ ಕ್ರಮಗಳೇನು ;

(ಈ) ನಿವೇಶನ ಇಲ್ಲದಿರುವ ಅಲೆಮಾರಿ ಕುಟುಂಬಗಳಿಗೆ ನಿವೇಶನವನ್ನು ನೀಡುವ ಬಗ್ಗೆ ಸರ್ಕಾರದ ಕ್ರಮಗಳೇನು ?

## ರಾಜ್ಯ ಹೆದ್ದಾರಿಗಳನ್ನು ಅಗಲೀಕರಣಗೊಳಿಸುವ ಬಗ್ಗೆ

**ಶ್ರೀ ಎಂ.ಎಲ್. ಅನಿಲ್‌ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೯೯ (೧೦೨೨) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಹೆದ್ದಾರಿಗಳನ್ನು ಅಗಲೀಕರಣಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ; ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ರಸ್ತೆ ಅಗಲೀಕರಣ ದುರಸ್ತಿ ಸಂಬಂಧ ಕಳೆದ ಎರಡು ವರ್ಷದಿಂದ ಬಿಡುಗಡೆಗೊಳಿಸಿರುವ ಅನುದಾನವೆಷ್ಟು ; (ವರ್ಷವಾರು ಸಂಪೂರ್ಣವಾದ ಮಾಹಿತಿ ನೀಡುವುದು)

(ಆ) ಜಿಲ್ಲಾ ಕೇಂದ್ರಗಳಿಂದ ತಾಲ್ಲೂಕು ಕೇಂದ್ರಗಳನ್ನು ಸಂಪರ್ಕಿಸುವ ರಸ್ತೆಗಳನ್ನು ಅಗಲೀಕರಣಗೊಳಿಸಿ ಚತುಷ್ಪಥ ರಸ್ತೆಯನ್ನಾಗಿಸಲು ಸರ್ಕಾರದಲ್ಲಿ ಪ್ರಸ್ತಾವನೆ ಇದೆಯೇ ; ಇಲ್ಲದಿದ್ದಲ್ಲಿ, ಈ ರಸ್ತೆಗಳ ಅಗಲೀಕರಣಗೊಳಿಸಲು ಸರ್ಕಾರವು ಯಾವ ಕ್ರಮವಹಿಸುವುದು ;

(ಇ) ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗೆ ಪ್ರಮುಖ ರಾಜ್ಯ ಹೆದ್ದಾರಿಯಾದ ಬಂಗಾರಪೇಟೆ–ಬಾಗೇಪಲ್ಲಿ ರಸ್ತೆಯನ್ನು ಅಗಲೀಕರಣಗೊಳಿಸಿ ಚತುಷ್ಪಥ ರಸ್ತೆಯನ್ನಾಗಿಸಲು ಸರ್ಕಾರದಲ್ಲಿ ಪ್ರಸ್ತಾವನೆ ಇದೆಯೇ ; ಇದ್ದಲ್ಲಿ ಯಾವ ಹಂತದಲ್ಲಿದೆ ; (ಸಂಪೂರ್ಣವಾದ ಮಾಹಿತಿ ನೀಡುವುದು)

(ಈ) ಕೋಲಾರ ಜಿಲ್ಲೆಯ ಮತ್ತೊಂದು ರಾಜ್ಯ ಹೆದ್ದಾರಿಯಾದ ಮಾಸ್ತಿ–ಕೊತ್ತಪಲ್ಲಿ ರಸ್ತೆಯನ್ನು ಅಗಲೀಕರಣಗೊಳಿಸಿ ಚತುಷ್ಪಥ ರಸ್ತೆಯನ್ನಾಗಿಸಲು ಸರ್ಕಾರದಲ್ಲಿ ಪ್ರಸ್ತಾವನೆ ಇದೆಯೇ ; ಇದ್ದಲ್ಲಿ, ಇನ್ನೂ ಯಾವ ಹಂತದಲ್ಲಿದೆ ? (ಸಂಪೂರ್ಣವಾದ ಮಾಹಿತಿ ನೀಡುವುದು)

## ಕರ್ನಾಟಕ ಭೂಮಿ ನೀಡಿಕೆ ನಿಯಮಗಳು, ೧೯೬೯ರನ್ವಯ ಗುತ್ತಿಗೆ ನೀಡಿರುವ ಉದ್ದೇಶದ ಬಗ್ಗೆ

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ) –**

೧೦೦ (೧೦೦೨) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ಭೂಮಿ ನೀಡಿಕೆ ನಿಯಮಗಳು, ೧೯೬೯ರನ್ವಯ ಯಾವ ಉದ್ದೇಶಕ್ಕಾಗಿ ಜಮೀನನ್ನು ನೀಡಲಾಗುವುದು ;

(ಆ) ಕರ್ನಾಟಕ ಭೂಮಿ ನೀಡಿಕೆ ನಿಯಮಗಳು, ೧೯೬೯ರನ್ವಯ ಪ್ರಸ್ತುತ ಗುತ್ತಿಗೆ ಅವಧಿಯಡಿಯಲ್ಲಿ ನಡೆಯುತ್ತಿರುವ ಕ್ಲಬ್‌ಗಳು ಯಾವುವು ; (ಕ್ಲಬ್‌ವಾರು ಗುತ್ತಿಗೆ ಅವಧಿ ನೀಡಿದ ವರ್ಷವಾರು ಸಂಪೂರ್ಣವಾದ ಮಾಹಿತಿ ನೀಡುವುದು)

(ಇ) ಕಂದಾಯ ಇಲಾಖೆಯು ಅನುಮತಿ ನೀಡಿರುವ ಮೇರೆಗೆ ಗುತ್ತಿಗೆ ಅವಧಿಗೆ ನೀಡಿರುವ ಕ್ಲಬ್‌ಗಳು ಯಾವುವು ; ಸದರಿ ಕ್ಲಬ್‌ಗಳಿಗೆ ಯಾವ ಮಾನದಂಡದ ಮೇಲೆ ಗುತ್ತಿಗೆ ನೀಡಲಾಗಿದೆ ; (ಕ್ಲಬ್‌ವಾರು ಸಂಪೂರ್ಣವಾದ ಮಾಹಿತಿ ನೀಡುವುದು)

(ಈ) ಕ್ಲಬ್‌ಗಳ ಭೂಮಿಯನ್ನು ಯಾವ ಉದ್ದೇಶಕ್ಕಾಗಿ ಬಳಸಲಾಗಿದೆ ಎಂಬುದನ್ನು ಗಣನೆಗೆ ತೆಗೆದುಕೊಂಡು ಭೂಮಿಗೆ ಬಾಡಿಗೆಯನ್ನು ಎಷ್ಟು ಪಾವತಿಸಬೇಕೆಂದು ನಿರ್ಧರಿಸುವವರು ಯಾರು ; ಭೂಮಿಯ ಮೌಲ್ಯವನ್ನು ಯಾವ ರೀತಿ ಪರಿಗಣಿಸಲಾಗುವುದು ; (ಸಂಪೂರ್ಣವಾದ ಮಾಹಿತಿ ನೀಡುವುದು)

(ಉ) ಪ್ರಸ್ತುತ ನಿಗದಿಪಡಿಸಿರುವ ಗುತ್ತಿಗೆ ಬಾಡಿಗೆಯನ್ನು ಎಲ್ಲಾ ಕ್ಲಬ್‌ಗಳು ಪಾವತಿಸುತ್ತಿವೆಯೇ ; ಪಾವತಿಸದೇ ಇದ್ದಲ್ಲಿ, ಕೈಗೊಂಡಿರುವ ಕ್ರಮಗಳೇನು ; (ಸಂಪೂರ್ಣ ಮಾಹಿತಿ ನೀಡುವುದು)

(ಊ) ಕರ್ನಾಟಕ ಭೂಮಿ ನೀಡಿಕೆ ನಿಯಮಗಳು, ೧೯೬೯ರನ್ವಯ ಗುತ್ತಿಗೆ ಅವಧಿ ೧೦ ವರ್ಷಗಳು ಮೀರಿದ್ದಲ್ಲಿ, ಸರ್ಕಾರದ ಪೂರ್ವಾನುಮತಿ ಪಡೆಯಬೇಕಾಗಿದ್ದು, ಪೂರ್ವಾನುಮತಿ ಪಡೆಯದೇ ಕ್ಲಬ್ ನಡೆಸುತ್ತಿರುವವರ ಮಾಹಿತಿ ಹಾಗೂ ಸದರಿ ಕ್ಲಬ್‌ಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ ? (ಸಂಪೂರ್ಣವಾದ ಮಾಹಿತಿ ನೀಡುವುದು)

## ಶ್ರೀ ಲಕ್ಷ್ಮಿ ವೆಂಕಟರಮಣ ದೇವಸ್ಥಾನದ ಜಮೀನು ಕುರಿತು

**ಶ್ರೀ ಎನ್. ನಾಗರಾಜು (ಎಂ.ಟಿ.ಬಿ) (ವಿಧಾನಸಭೆಯಿಂದ ಚುನಾಯಿತರಾದವರು) –**

೧೦೧ (೧೯೯೦) ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನಲ್ಲಿರುವ ಶ್ರೀ ಲಕ್ಷ್ಮಿ ವೆಂಕಟರಮಣ ಸ್ವಾಮಿ ದೇವಸ್ಥಾನದ ಇನಾಂತಿ ಜಮೀನು ಬೆಂಗಳೂರು ನಗರ ಜಿಲ್ಲೆಯ ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಮಂಡೂರು ಗ್ರಾಮದ ಸರ್ವೆ ನಂ. ೮೭, ೯೫, ೧೧೮ರಲ್ಲಿ ಸುಮಾರು ೨೧ ಎಕರೆ ೨೦ ಗುಂಟೆ ಜಮೀನಿದ್ದು, ಈ ಜಮೀನನ್ನು ಕೆಲವರು ನಕಲಿ ದಾಖಲೆಗಳನ್ನು ಸೃಷ್ಟಿಸಿಕೊಂಡು ಕಬಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; (ಸಂಪೂರ್ಣ ವಿವರ ನೀಡುವುದು)

(ಆ) ಮಾನ್ಯ ಉಪ ವಿಭಾಗಾಧಿಕಾರಿಗಳು, ಮಾನ್ಯ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಈ ಸ್ವತ್ತಿಗೆ ಸಂಬಂಧಿಸಿದಂತೆ ದೇವಸ್ಥಾನದ ಪರವಾಗಿ ಆದೇಶವಾಗಿರುವುದು ನಿಜವೇ ; ಹಾಗಿದ್ದಲ್ಲಿ, ಆದೇಶದ ದೃಢೀಕೃತ ಪ್ರತಿಗಳನ್ನು ನೀಡುವುದು ;

(ಇ) ಸದರಿ ದೇವಸ್ಥಾನದ ಸ್ವತ್ತಿಗೆ ಸಂಬಂಧಿಸಿದಂತೆ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿರುವುದು ನಿಜವೇ ; ಹಾಗಿದ್ದಲ್ಲಿ, ರಾಜ್ಯ ಉಚ್ಚ ನ್ಯಾಯಾಲಯದಲ್ಲಿರುವ ಈ ದಾವೆಯು ಪ್ರಸ್ತುತ ಯಾವ ಹಂತದಲ್ಲಿದೆ ? (ಸಂಪೂರ್ಣ ಮಾಹಿತಿ ನೀಡುವುದು)

## ಪ್ರತಿ ಗ್ರಾಮ ಪಂಚಾಯತ್‌ಗೆ ಕನಿಷ್ಠ ೧೦೦ ಮನೆಗಳನ್ನು ಮಂಜೂರು ಮಾಡುವ ಕುರಿತು

**ಶ್ರೀ ಸುನೀಲ್ ಗೌಡ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೦೨ (೯೯೬) ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪ್ರತಿ ಗ್ರಾಮ ಪಂಚಾಯತ್‌ಗೆ ಕನಿಷ್ಠ ೧೦೦ ಮನೆಗಳನ್ನು ಮಂಜೂರು ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ ; ಇದ್ದರೆ ಯಾವ ಕಾಲಮಿತಿಯೊಳಗೆ ಮನೆಗಳನ್ನು ಮಂಜೂರು ಮಾಡಲಾಗುವುದು ;

(ಆ) ಕಳೆದ ಮೂರು ವರ್ಷಗಳಲ್ಲಿ ಎಷ್ಟು ಮನೆಗಳನ್ನು ವಿವಿಧ ವಸತಿ ಯೋಜನೆಗಳಲ್ಲಿ ಗ್ರಾಮ ಪಂಚಾಯತಿಗಳಿಗೆ ಮಂಜೂರು ಮಾಡಲಾಗಿದೆ ; (ವಿವರಗಳನ್ನು ಜಿಲ್ಲಾವಾರು ನೀಡುವುದು)

(ಇ) ವಿವಿಧ ವಸತಿ ಯೋಜನೆಗಳಲ್ಲಿ ಕಳೆದ ೩ ವರ್ಷಗಳಲ್ಲಿ ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಿಗೆ ಎಷ್ಟು ಮನೆಗಳನ್ನು ಮಂಜೂರು ಮಾಡಲಾಗಿದೆ ; (ವಿವರಗಳನ್ನು ಗ್ರಾಮ ಪಂಚಾಯತಿವಾರು ನೀಡುವುದು)

(ಈ) ಕಳೆದ ಮೂರು ವರ್ಷಗಳಲ್ಲಿ ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳ ವಿವಿಧ ವಸತಿ ಯೋಜನೆಗಳ ಮನೆಗಳ ಪ್ರಗತಿ ಯಾವ ಹಂತದಲ್ಲಿದೆ ? (ವಿವರಗಳನ್ನು ಗ್ರಾಮ ಪಂಚಾಯತಿವಾರು ನೀಡುವುದು)

## ಮತ್ಸ್ಯಾಶ್ರಯ ಯೋಜನೆಯ ಅಸಮರ್ಪಕ ಅನುಷ್ಠಾನ ಕುರಿತು

**ಡಾ: ಯತೀಂದ್ರ ಎಸ್. (ವಿಧಾನಸಭೆಯಿಂದ ಚುನಾಯಿತರಾದವರು) –**

೧೦೩ (೯೬೩) ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮತ್ಸ್ಯಾಶ್ರಯ ಯೋಜನೆಯಡಿ ಆಯ್ಕೆಯಾದ ಫಲಾನುಭವಿಗಳು ಮನೆ ನಿರ್ಮಿಸಲು ಆಸಕ್ತಿ ವಹಿಸದೇ ಮನೆಗಳು ಲ್ಯಾಪ್ಸ್ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಕಳೆದ ೩ ವರ್ಷಗಳಲ್ಲಿ ಈ ರೀತಿ ಎಷ್ಟು ಮನೆಗಳು ಲ್ಯಾಪ್ಸ್ ಆಗಿವೆ ;

(ಇ) ಈ ರೀತಿ ಲ್ಯಾಪ್ಸ್ ಆಗಲು ಕಾರಣಗಳೇನು ; ಈ ಸಮಸ್ಯೆಯನ್ನು ಪರಿಹರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

## ಪಶುಸಂಗೋಪನಾ ಇಲಾಖೆಯಲ್ಲಿ ಹುದ್ದೆಗಳು ಖಾಲಿ ಇರುವ ಬಗ್ಗೆ

**ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೧೦೪ (೧೦೫೫) ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪಶುಸಂಗೋಪನಾ ಇಲಾಖೆಯಲ್ಲಿ ಪ್ರಸ್ತುತ ಎಷ್ಟು ವೈದ್ಯರು ಕಾರ್ಯ ನಿರ್ವಹಿಸುತ್ತಿದ್ದಾರೆ ; ಇದರಲ್ಲಿ ಖಾಯಂ ವೈದ್ಯರ ಹಾಗೂ ಖಾಸಗಿ ವೈದ್ಯರ ಸಂಖ್ಯೆ ಎಷ್ಟು ; ಸರ್ಕಾರದಿಂದ ಮಂಜೂರಾಗಿರುವ ಹುದ್ದೆಗಳ ಸಂಖ್ಯೆ ಎಷ್ಟು ;

(ಆ) ಕೋಲಾರ ಜಿಲ್ಲೆಯ ಪಶುಸಂಗೋಪನಾ ಇಲಾಖೆಯಲ್ಲಿ ವೈದ್ಯರು ಮತ್ತು ಸಿಬ್ಬಂದಿ ಸೇರಿ ೩೩೮ ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ೨೦೨೦ನೇ ಜಾನುವಾರು ಗಣತಿ ಪ್ರಕಾರ ರಾಜ್ಯದಲ್ಲಿ ಎಮ್ಮೆ, ಕುರಿ, ಮೇಕೆ, ಹಂದಿ ಮತ್ತು ಕೋಳಿಗಳ ಸಂಖ್ಯೆ ಎಷ್ಟು ; ಈ ಜಾನುವಾರು ಸಂಖ್ಯೆಗೆ ಅನುಗುಣವಾಗಿ ವೈದ್ಯರು ಮತ್ತು ಸಿಬ್ಬಂದಿಗಳ ನೇಮಕವಾಗಿದೆಯೇ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಈ) ರಾಸುಗಳು ಅಕಾಲಿಕವಾಗಿ ಮೃತಪಟ್ಟಿದ್ದರೆ ಇದರ ಪರಿಹಾರಕ್ಕಾಗಿ ಎಷ್ಟು ರೂಪಾಯಿಗಳನ್ನು ನಿಗದಿಪಡಿಸಲಾಗಿದೆ ; ಎಲ್ಲಾ ಪ್ರಾಣಿಗಳನ್ನು ಒಳಗೊಂಡಂತೆ ನಿಗದಿಪಡಿಸುವ ಪರಿಹಾರ ಮತ್ತು ಇನ್ನೂ ಹೆಚ್ಚು ಮಾಡಲು ಸರ್ಕಾರದ ಆಲೋಚನೆ ಇದೆಯೇ ?

## ಬೆಂಗಳೂರು ನಗರ ಜಿಲ್ಲೆಯ ೮ ಗ್ರಾಮಗಳ ಭೂದಾಖಲೆಯ ಬಗ್ಗೆ

**ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೦೫ (೧೯೯೫) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಭಾಷಾವಾರು ಪ್ರಾಂತ್ಯಗಳ ವಿಂಗಡಣೆಯಾಗಿ ಸುಮಾರು ೬೮ ವರ್ಷಗಳು ಕಳೆದರು ಭೂ ದಾಖಲೆಗಳಿಗಾಗಿ ಇಂದಿಗೂ ತಮಿಳುನಾಡಿನ ಕಂದಾಯ ಕಚೇರಿಗಳಿಗೆ ಅಲೆಯಬೇಕಾದ ಅನಿವಾರ್ಯತೆ ಆನೇಕಲ್ ತಾಲ್ಲೂಕಿನ ಮರಸೂರು ಗ್ರಾಮ ಪಂಚಾಯಿತಿಯ ೦೮ ಗ್ರಾಮಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರವು ಯಾವ ಕ್ರಮ ಕೈಗೊಂಡಿದೆ ; (ವಿವರ ನೀಡುವುದು)

(ಆ) ೮ ಗ್ರಾಮದ ರೈತರು ಕಂದಾಯ ದಾಖಲೆಗಳಿಗಾಗಿ ಚೆನ್ನೈಗೆ ಹೋಗುತ್ತಿರುವುದು ಮತ್ತು ಜಮೀನು ಮಾರಾಟ, ಹಕ್ಕು ಪತ್ರ ಸೇರಿ

ಮತ್ತಿತರ ಸಂದರ್ಭಗಳಲ್ಲಿ ದಾಖಲೆಗಳು ಕರ್ನಾಟಕ ಸರ್ಕಾರದಿಂದ ಮಾನ್ಯಗೊಳ್ಳುತ್ತಿಲ್ಲವಾದ ಕಾರಣ ಗ್ರಾಮಸ್ಥರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು ;

(ಇ) ಸರ್ಕಾರವು ಇದನ್ನು ಗಂಭೀರವಾಗಿ ಪರಿಗಣಿಸಿ ಯಾವ ಕಾಲಮಿತಿಯೊಳಗೆ ಈ ತೊಂದರೆಯನ್ನು ಸರಿಪಡಿಸಿ ಗ್ರಾಮಸ್ಥರಿಗೆ ನೆಮ್ಮದಿಯಿಂದ ಜೀವನ ಸಾಗಿಸಲು ಅನುಕೂಲ ಮಾಡಿಕೊಡುವುದು ? (ಸಂಪೂರ್ಣ ವಿವರ ನೀಡುವುದು)

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

**List of Questions**
**for Oral Answers**

**Total No. of**
**Questions - 15**

# LIST - 7

# KARNATAKA LEGISLATIVE COUNCIL

## ONE HUNDRED AND FIFTY SIXTH SESSION

## Wednesday, the 20th August, 2025

---

### GROUP - III

1. Minister for Transport and Muzrai
2. Minister for Public Works
3. Minister for Revenue
4. Minister for Housing, Wakf and Minority Welfare
5. Minister for Animal Husbandry and Sericulture
6. Minister for Fisheries and Ports and Inland Water Transport

---

### THE NAME OF WAKF IS MENTIONING IN THE PAHANI OF FARMERS

**Sri K.S. Naveen (Local Authorities Constituency) -**

91 (1065) Will the Minister for Revenue be pleased to state :-

(a) the name of wakf is being mentioned in the pahani which is in the name of the farmers during the last few days across the State, the stand of the Government in this regard ;

(b) due to the same the anger has been arised among farmers across the State, the Hon'ble Chief Minister

has stated that it would be rectified and withdrawn, whether the name of the farmers has been mentioned in the changed pahani ; (details be furnished)

(c) the total number of farmers' land in the State where the pahani has been changed in the name of wakf in this manner ; (districtwise details of farmers be furnished)

(d) out of the said changed pahani, the extent of the land that has been amended in the name of farmers again ; (districtwise details of farmers be furnished)

(e) the details of the criterias for converting the land of the farmers into the Pahani of wakf ; whether it is right to do the same in this manner ; the step taken by the Government in this regard ? (complete details be furnished)

## AMOUNT RELEASING UNDER ARIVU SCHEME FOR MINORITY STUDENTS

**Sri Thippanappa Kamaknoor (Elected by Legislative Assembly) -**

92 (982) Will the Minister for Housing, Wakf and Minority Welfare be pleased to state :-

(a) whether it has come to the notice of the Government that an apprehension is being posed for depriving of 1012 minority students who are studying in medical and engineering colleges of the State from the examination of current academic year due to non releasing of amount under the Arivu scheme ;

(b) if so, the reasons for the amount that has not released to meritorious students under this scheme ;

(c) whether the necessary step would be taken to release the amount without disrupting the education of meritorious students ?

## REGARDING SAFETY OF FISHERMEN

**Sri Kishor Kumar Puttur (Local Authority Constituency) -**

93 (1038) Will the Minister for Fisheries and Ports and Inland Water Transport be pleased to state :-

(a) the number of fishermen who have died due to fishing boat accidents in the coastal district (Dakshina Kannada, Udupi, Uttar Kannada) in the last 5 years ; (talukwise Complete details be furnished)

(b) whether it has not come to the notice of the Government that there is no maintenance of estuary gate, desilting and the expansion of breakwater, which is posing threat to the life of fishermen ; if so, an appropriate reasons thereof ; the reasons for not taken up the same ;

(c) whether the dredging works has been carried out in the fishing ports during the last 3 years ; if so, the particulars of posts in which the dredging have been carried out ; (details be furnished) the prevailing problem to the Government for carry out of dredging work from time to time ;

(d) the particulars of safety equipments which are being provided to fishermen currently ; (details be furnished) whether is it possible to provide the life Jackets for all fishers man by the Government; whether the life Jackets has been made mandatory for all fishermen ?

## SAKRAMATHI OF HOUSES IN SOPPINA BETTA

**Sri Shantharama Budna Siddi (Nominated) -**

94 (1060) Will the Minister for Revenue be pleased to state :-

(a) whether the approval has been accorded without any problem for the construction of house in soppina betta in Uttara Kannada district ; whether the

sakramathi of land of houses is being carried out that have been constructed already; the steps of the Government in this regard ;

(b) the particulars of measures of the Government to remove 'B' Kharab of soppina betta ? (details be furnished)

## REGARDING DRIVING LICENCE IN REGIONAL TRANSPORT OFFICES

**Sri Nagaraju M. (Elected by Legislative Assembly) -**

95 (1090) Will the Minister for Transport and Muzrai pleased to state :-

(a) whether it has come to the notice of the Government that over 7 to 8 lakhs of driving licence and registration certificates are pending for issuance from the regional transport offices and the smart cards have not been received by the applicants even after over 40-50 days in the State; if so, the reasons for the delay ; the step taken by the department there for ;

(b) an exorbitant amount is being imposed by the auto drivers than the travelling price fixed by the Government in Bengaluru and other (Tier-II) cities after the bike taxies have been prohibited across the State, whether the Government has failed to control the same ; the reasons for the step has not been taken eventhough there is information to the transport officers with regard to the said issue ;

(c) whether it is true that the irregularities are being increased day by day in the regional transport offices across the State ; the step that has been taken to control the same ; the steps that have been taken to reduce the menace of middlemen ?

## REGARDING KARNATAKA VETERINARY, ANIMAL AND FISHERIES SCIENCES UNIVERSITY IN BIDAR CITY

**Dr. Talwar Sabanna (Nominated) -**

96 (1008) Will the Minister for Animal Husbandry and Sericulture be pleased to state :-

(a) whether it has come to the notice of the Government that Karnataka Veterinary, Animal and Fisheries Sciences University is facing unstable condition that has been established in Bidar city of Kalyana Karnataka due to the intention of elimination of regional imbalance based on the report of Dr.D.M.Nanjundappa ;

(b) whether it is true that the Government has come forward to merge this university with the University of the Agricultural Sciences, Raichur and the University of Horticultural Sciences, Bagalkot without providing the provision to work independently ;

(c) the measures taken by the Government to meet the shortage of teaching/non teaching staff, buildings and the grants in the Karnataka Veterinary, Animal and Fisheries Sciences University of Bidar ;

(d) whether it will cause injustice for the people of this region that the high power committee has been constituted already to merge this university with other universities when it is functioning successfully ; whether it will cause impedement for the development of university ;

(e) whether the step would be taken by the Government for providing all the required facilities for the development thereof by making provision to the university for functioning independently by cancelling high power committee without merging the Karnataka Veterinary, Animal and Fisheries Sciences University of Bidar with other universities ?

## MAINTENANCE OF BRIDGES OF PUBLIC WORKS DEPARTMENT

**Sri Manjunatha Bhandari (Local Authorities Constituency) -**

97 (1043) Will the Minister for Public Works be pleased to state :-

(a) the particulars of connecting bridges which are coming under the Public Works Department in Udupi and Dakshina Kannada districts; the financial year in which these bridges have been constructed ; (talukwise complete information alongwith extent of area be furnished)

(b) whether the maintenance of the bridges is being carried out from time to time in these districts; the officer who is responsible for the same; the number of bridges and the amount in which the maintenance has been carried out so far ; (complete details of each work along with the type of maintenance be furnished)

(c) whether the concerned officers have submitted their reports to the department with regard to the number of bridges which are in dilapidated condition ; the steps taken in the department level with regard to the same ;

(d) Thombattu-Kabbinale a connecting bridge of Amasebailu Machattu village in Kundapur taluk is in dangerous collapsing condition, whether it has come to the notice of the department that there is a possibility of disconnection between 2 areas ; whether the report has been submitted by the officers of the department in this regard; the copy of the report be furnished ;

(e) the measures which are being taken to the reconstruction of bridge so far ; the date on which this work would be commenced ?

## HOUSES PROVIDED TO NOMADIC COMMUNITIES UNDER VARIOUS HOUSING SCHEMES

**Sri D.T. Srinivas (D.T.S) (Teachers' Constituency) -**

98 (1034) Will the Minister for Housing, Wakf and Minority Welfare be pleased to state :-

(a) the number of houses that have been sanctioned to backward nomadic communities under various housing schemes from 2023-24 to 2025-26 (districtwise and Assembly Constituency wise information be furnished)

(b) out of which, the number of houses that have been completed and incompleted so far ;

(c) whether there is a possibility to construct of houses in the existing unit cost ; if not, the steps taken by the Government to revise the same ;

(d) the measures of the Government with regard to providing the sites to nomadic families those who have no sites ?

## REGARDING WIDENING OF STATE HIGHWAYS

**Sri M.L. Anil Kumar (Local Authorities Constituency) -**

99 (1022) Will the Minister for Public Works be pleased to state :-

(a) the steps taken by the Government for widening of the State Highways; the grant that has been released with regard to road widening and repair in Kolar and Chikkaballapur districts during the last two years ; (yearwise complete information be furnished)

(b) whether the proposal is before the Government to convert the roads which are connecting from the district centres to the taluks centres into four-lane roads by widening ; if not, the steps that would be taken by the Government for widening of these roads ;

(c) whether the proposal is before the Government to convert Bangarpet-Bagepalli road which is a major State highway to Kolar and Chikkaballapur districts into four lane road by widening ; if so, the present stage of the same ; (complete information be furnished)

(d) whether the proposal is before the Government to convert Masti-Kothapalli road which is another State highway of Kolar district into four lane road by widening ; if so, the present stage of the same ? (complete information be furnished)

**PROVIDING LAND ON LEASE AS PER THE KARNATAKA LAND GRANT RULES, 1969**

**Sri S.L. Bhojegowda (Teachers' Constituency) -**

100 (1002) Will the Minister for Revenue pleased to state:-

(a) the purpose for which the land would be provided as per the Karnataka Land Grant Rules, 1969 ;

(b) the particulars of clubs which are functioning under the lease period at present as per the Karnataka Land Grant Rules, 1969 ; (yearwise and clubwise complete information of lease period be furnished)

(c) the particulars of clubs that have been given on lease under the approval which has been accorded by the Revenue Department; the criteria based on which the lease has been given for the said clubs ; (clubwise complete information be furnished)

(d) the persons who will determine the amount of the rent which has to be paid for the land by considering the purpose for which the land of clubs has been utilized ; the manner in which the value of land would be considered ; (clubwise complete information be furnished)

(e) whether the lease rent is being paid by all the clubs that has been fixed at present; if not, the measurers taken for the same; (complete information be furnished)

(f) if the lease period has exceeded 10 years as per the Karnataka Land Grant Rules, 1969, the prior permission has to be obtained by the Government, the information of the persons who are running the club without taking prior permission and the action that has been taken against the said club ? (complete information be furnished)

## LAND OF SRI LAKSHMI VENKATARAMANA SWAMY TEMPLE

**Sri N. Nagaraju (M.T.B) (Eleceted by Legislative Assembly) -**

101 (1190) Will the Minister for Transport and Muzrai be pleased to state :-

(a) Inam land approximately 21 acres, and 20 guntas of Land bearing survey No.87, 95, 118 of Manduru village of Bidarahalli Hobli in Bengaluru East taluk of Bengaluru Urban district belongs to Sri Lakshmi Venkataramana Swamy temple in Hoskote taluk of Bengaluru Rural district, whether it has come to the notice of the Government that this land has been grabbed by some land grabbers by creating fake documents ; (complete details be furnished)

(b) whether it is true that an order has been issued in favour of the temple by the Hon'ble Assistant Commissioner and Hon'ble Deputy Commissioners Court with regard to this property ; if so, certified copies of the order be furnished ;

(c) whether it is true that the suit has been filed in the High Court of Karnataka with regard to the property of the said temple ; if so, the present stage of the

suit in the State High Court? (complete information be furnished)

## SANCTIONING OF MINIMUM 100 HOUSES TO EACH GRAM PANCHAYAT

**Sri Sunilgouda Patil (Local Authorities Constituency) -**

102 (996) Will the Minister for Housing, Wakf and Minority Welfare be pleased to state :-

(a) whether the proposal is before the Government to sanction minimum 100 houses to each Gram Panchayat ; if so, the timelimit within which the houses would be sanctioned ;

(b) the number of houses that have been sanctioned to Gram Panchayats under various housing schemes during the last three years ; (districtwise details be furnished)

(c) the number of houses that have been sanctioned to Vijayapura and Bagalkot districts under various housing schemes during the last 3 years ; (Gram panchayatwise details be furnished)

(d) the present stage of the progress of houses under various housing schemes in Vijayapura and Bagalkot districts during the last three years ? (Gram panchayatwise details be furnished)

## IMPROPER IMPLEMENTATION OF MATSYAASHRAYA SCHEME

**Dr. Yathindra S. (Elected by Legislative Assembly) -**

103 (963) Will the Minister for Fisheries and Ports and Inland Water Transport be pleased to state:-

(a) whether it has come to the notice of the Government that the houses are being lapsed without showing interest to construct the house by the beneficiaries

who have been selected under Matsyaashraya Scheme ;

(b) the number of houses that have been lapsed in this manner during the last 3 years ;

(c) the reasons for lapses in this manner; the steps taken by the Government to resolve this problem ?

## VACANT POSTS IN DEPARTMENT OF ANIMAL HUSBANDRY

**Sri Govinda Raju (Elected by Legislative Assembly) -**

104 (1055) Will the Minister for Animal Husbandry and Sericulture be pleased to state :-

(a) the number of doctors who are working in the Department of Animal Husbandry at present ; out of which, the number of permanent and private doctors ; the number of posts that have been sanctioned by the Government ;

(b) whether it has come to the notice of the Government that 338 posts including doctors and staff are lying vacant in the Department of Animal Husbandry of Kolar district ;

(c) the number of buffalo, sheep, goat, pig and chicken in the State as per Livestock Census of 2020 ; whether the doctors and staff have been appointed according to the ratio of livestock ; (districtwise information be furnished)

(d) if the untimely death of cattle has occurred, the amount that has been fixed prescribed for the compensation ; whether there is a contemplation before the Government to enhance the compensation including all animals ?

## REGARDING LAND RECORDS OF 08 VILLAGES OF BENGALURU URBAN DISTRICT

**Sri H.S. Gopinath (Local Authorities Constituency) -**

105 (1095) Will the Minister for Revenue pleased to state :-

(a) whether it has come to the notice of the Government that the hardship is being caused to 08 villages of Marasur Gram Panchayat in Anekal taluk even today as they is a necessarily of roaming for the land records to revenue office in Tamilnadu eventhough approximately 68 years have been elapsed by formation of linguistic provinces ; if so, the step taken by the Government ; (details be furnished)

(b) whether it has come to the notice of the Government that the farmers of 08 villages are going to Chennai for revenue records and the hardship is being caused to the villagers due to the records have not been validated by the Karnataka Government in the circumstances of sale of land, title deeds, and other related matters ; if so, the steps taken by the Government in this regard ;

(c) the time limit within which this problem would be setright by the Government by considering the same as serious matter and would facilitate the farmers for their peaceful life ? (complete details be furnished)

**K.R. MAHALAKSHMI**
Secretary
Karnataka Legislative Council

Government Press, Vikasa Soudha Unit, PWS-274-Bengaluru, P2